ಅ) ಜಾತಿ ಆಧಾರವನ್ನು ಪರಿಗಣನೆಗೆ ತೆಗೆದುಕೊಳ್ಳುವುದರಿಂದ ಸಮಾಜ ಎಲ್ಲಾ ದುರ್ಬಲ ವರ್ಗದವರಿಗೆ ನೀಡುವ ಸೌಲಭ್ಯವನ್ನು ಸಮನಾಗಿ ಮತ್ತು ಸಮರ್ಪಕವಾಗಿ ದೊರೆಯಬೇಕಾಗಿದ್ದು, ಇತರೆ ಎಲ್ಲಾ ಜಾತಿಯ ಸಮುದಾಯಕ್ಕೆ ಅನ್ವಯವಾಗದೇ ಇರುವುದು ಸರ್ಕಾರದ ಗಮನದಲ್ಲಿದೆಯೇ ,

ಆ) ಹಾಗಿಲ್ಲದಿದ್ದಲ್ಲಿ ರಾಜ್ಯಾದ್ಯಂತ ಎಲ್ಲಾ ಜಾತಿ ಸಮುದಾಯಗಳಲ್ಲಿ ಕಡು ಬಡವರಿಗೆ ಸರಿ ಸಮನಾಗಿ ಅನ್ವಯವಾಗುವಂತೆ ಯೋಜನೆಗಳನ್ನು ಹಮ್ಮಿಕೊಳ್ಳುವುದು ಗಮನದಲ್ಲಿದೆಯೇ ,

ಇ) ಹಾಗಿದ್ದಲ್ಲಿ, ಈ ಬಗ್ಗೆ ಯಾವಾಗ ಕ್ರಮ ಕೈಗೊಳ್ಳುತ್ತದೆ ?

ಶ್ರೀ ಬಾಲಚಂದ್ರ ಲ ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು)

ಅ) ಹೌದು

ಆ) ಹೌದು

ಇ) ಮೀಸಲಾತಿ ಅವಕಾಶವು ನ್ಯಾಯ ಸಮ್ಮತವಾಗಿ ದೊರೆಯದಿರುವ ಕರ್ನಾಟಕ ರಾಜ್ಯದ ಅನುಸೂಚಿತ ಜಾತಿಗಳ ನಿರ್ದಿಷ್ಟ ಜಾತಿಗಳು, ಜನಾಂಗಗಳು ಹಾಗೂ ಬುಡಕಟ್ಟುಗಳನ್ನು ಗುರುತಿಸುವುದಕ್ಕಾಗಿ ಈಗಾಗಲೇ ನಿವೃತ್ತ ನ್ಯಾಯಮೂರ್ತಿ ಎ ಜೆ ಸದಾಶಿವ ವಿಚಾರಣಾ ಆಯೋಗವನ್ನು ರಚಿಸಿದ್ದು, ಆಯೋಗವು ನೀಡುವ ವರದಿಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು

ಹಿಂದುಳಿದ ವರ್ಗಗಳಿಗೆ ಸಂಬಂಧಪಟ್ಟಂತೆ ಸರ್ಕಾರವು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಶಾಶ್ವತ ಆಯೋಗವನ್ನು ರಚಿಸಿದ್ದು, ಪ್ರಸ್ತುತ ಆಯೋಗದ ಅಧ್ಯಕ್ಷರು ಮತ್ತು ಸದಸ್ಯರನ್ನು ನೇಮಕ ಮಾಡುವ ವಿಷಯ ಪರಿಶೀಲನೆಯಲ್ಲಿದ್ದು, ನೇಮಕವಾದ ನಂತರ ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಮನೆಮನೆ ಸಮೀಕ್ಷಾ ಕಾರ್ಯವನ್ನು ನಡೆಸಿ ಆಯೋಗವು ನೀಡುವ ವರದಿಯನ್ವಯ ಮುಂದಿನ ಕ್ರಮವನ್ನು ತೆಗೆದುಕೊಳ್ಳಲಾಗುವುದು

100 (168) ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್) ಮಾನ್ಯ ಪಶುಸಂಗೋಪನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಶಿಗ್ಗಾಂವ್ ತಾಲ್ಲೂಕಿನ ಬಂಕಾಮರ ಪಟ್ಟಣದ ಖಿಲಾರಿ ತಳಿ ಸಂವರ್ಧನ ಕೇಂದ್ರದಲ್ಲಿ ಹಾಗೂ ಕೋಟೆ ಆವರಣದಲ್ಲಿ ಜಾನುವಾರುಗಳಿಗೆ ಕೊಟ್ಟಿಗೆ ಕೊರತೆ, ರಸ ಮೇವಿನ ಗುಂಡಿಗಳು ಹಾಳಾಗಿ ಹೋಗಿರುವುದು ಮತ್ತು ಮೇವು ಸಂಗ್ರಹಕ್ಕೆ ಚಾವಣಿ ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಬಂಕಾಮರ ಕೋಟೆ ಆವರಣದಲ್ಲಿ 120 ಜಾನುವಾರುಗಳಿದ್ದರೂ ಕೇವಲ 90X30 ಅಡಿ ಅಳತೆಯ ಒಂದು ಕೊಟ್ಟಿಗೆ ಹಾಗೂ 20X30 ಅಡಿ ಅಳತೆಯ ಎರಡು ಸಣ್ಣ ಕೊಟ್ಟಿಗೆಗಳು ಮಾತ್ರ ಇರುವುದರಿಂದ ಜಾನುವಾರುಗಳಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ,

ಇ) ಬಂಕಾಮರ ಕೋಟೆ ಆವರಣದಲ್ಲಿ ಸನ್ 1919ರಲ್ಲಿ ಕಲ್ಲು–ಮಣ್ಣಿನಿಂದ ಕಟ್ಟಿದ ರಸ ಮೇವಿನ ಗುಂಡಿಗಳಿದ್ದು ಇವುಗಳು ಸಂಪೂರ್ಣ ಹಾಳಾಗಿ ಹೋಗಿದ್ದು, ರಸಮೇವು ಸಂಗ್ರಹಣೆ ಮಾಡಲು ಬಾರದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಈ) ಬಂಕಾಮರ ಕೋಟೆಯಲ್ಲಿ ಡಿ ದರ್ಜೆ ಸಿಬ್ಬಂದಿ ಕೊರತೆ ತುಂಬಾ ಇದ್ದು, ಪ್ರಗತಿ ಸಾಧಿಸಲಿಕ್ಕೆ ಹಾಗೂ ದೈನಂದಿನ ಚಟುವಟಿಕೆಗಳಿಗೆ ತುಂಬಾ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಉ) ಹಾಗಿದ್ದಲ್ಲಿ, ಹೊಸ ಜಾನುವಾರು ಕೊಟ್ಟಿಗೆ ನಿರ್ಮಾಣ ಮಾಡಲು, ರಸ ಮೇವಿನ ಗುಂಡಿಗಳನ್ನು ನಿರ್ಮಿಸಲು, ಡಿ ದರ್ಜೆ ಸಿಬ್ಬಂದಿ ನೇಮಕ ಮಾಡಲು ಹಾಗೂ ಮೇವು ಸಂಗ್ರಹಗಾರ ನಿರ್ಮಾಣಕ್ಕೆ ಸರ್ಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ ?

ಶ್ರೀ ರೇವುನಾಯಕ್ ಬೆಳಮಗಿ (ಪಶುಸಂಗೋಪನೆ ಸಚಿವರು)

ಅ) ಬಂದಿದೆ

ಆ) ಬಂದಿದೆ

ಇ) ಬಂದಿದೆ

ಈ) ಬಂದದೆ

ಉ) ಹಾಲಿ ಕ್ಷೇತ್ರದಲ್ಲಿರುವ ಜಾನುವಾರುಗಳ ಪೈಕಿ ಕೆಲವು ಜಾನುವಾರುಗಳ ಪೈಕಿ ಕೆಲವು ಜಾನುವಾರುಗಳನ್ನು ವಾರ್ಷಿಕ ವಿಲೇವಾರು ಮಾಡಿದ ನಂತರ ಉಳಿದ ಜಾನುವಾರುಗಳಿಗೆ ಅವಶ್ಯವಿರುವ ಕೊಟ್ಟಿಗೆ ನಿರ್ಮಾಣ ಮತ್ತು ಇತರೆ ಕಾಮಗಾರಿಗಳನ್ನು' ಅನುದಾನದ ಲಭ್ಯತೆಗನುಗುಣವಾಗಿ ತೆಗೆದುಕೊಳ್ಳಲಾಗುವುದು

'ಡಿ' ದರ್ಜೆ ನೌಕರರ ಹುದ್ದೆಗಳ ನಾಕಷ್ಟು ಸಂಖ್ಯೆಯಲ್ಲಿ ಸದರಿ ಕ್ಷೇತ್ರಕ್ಕೆ ಸೃಷ್ಟಿಸಿಲ್ಲವಾದ ಕಾರಣ ದೈನಂದಿನ ಮತ್ತು ಋತುಮಾನ ಕೆಲಸಗಳನ್ನು ದರಗುತ್ತಿಗೆ ಆಧಾರದ ಮೇಲೆ ನಿರ್ವಹಿಸಲಾಗುತ್ತಿದೆ

102 (176) ಶ್ರೀ ಶ್ರೀರಾಮರೆಡ್ಡಿ ಜಿ ವಿ (ಬಾಗೇಪಲ್ಲಿ) ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಡಾ ಅಂಬೇಡ್ಕರ್ ಅಭಿವೃದ್ಧಿ ನಿಗಮ ಮತ್ತು ಡಿ ದೇವರಾಜ ಅರಸ್ ಅಭಿವೃದ್ಧಿ ನಿಗಮಗಳ ವತಿಯಿಂದ ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ 2005–06ನೇ ಸಾಲಿನ ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆ ಬಾವಿಗಳನ್ನು ಕೊರೆದಿದ್ದು, ಈ ಪೈಕಿ ಕೆಲವರಿಗೆ ಇದುವರೆವಿಗೂ ಪಂಪು ಮೋಟಾರ್ ವಿತರಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಬಂದಿದ್ದಲ್ಲಿ ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮವೇನು ?